# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2085

ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ

ಉತ್ತರಿಸುವ ದಿನಾಂಕ : 25.03.2026

ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹೆನ್ನಾಗರ ಗ್ರಾಮದ ಸರ್ವೆ ನಂ 5 ರಲ್ಲಿ, 52 ಎಕರೆ 25 ಗುಂಟೆ ಜಮೀನನ್ನು ತಾತ್ಕಾಲಿಕವಾಗಿ ಅರಣ್ಯ ಇಲಾಖೆಯ ಉಸ್ತುವಾರಿಗಾಗಿ ಹಾಗೂ ಸಂರಕ್ಷಣೆಗಾಗಿ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. | ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಆದೇಶ ಸಂ.ಡಿವಿಎಸ್(ಡಿ)ಸಿಆರ್ 10/04-05 ಬೆಂಗಳೂರು ರಂತೆ ಹೆನ್ನಾಗರ ಗ್ರಾಮದ ಸರ್ವೆ ನಂ 5 ರಲ್ಲಿ 52 ಎಕರೆ 25 ಗುಂಟೆ ಜಮೀನನ್ನು ಅರಣ್ಯ ಇಲಾಖೆಗೆ ಸಂರಕ್ಷಣೆಗಾಗಿ ವರ್ಗಾಯಿಸುವ ಬಗ್ಗೆ ಆದೇಶಿಸಲಾಗಿರುತ್ತದೆ. |

| | | |
|---|---|---|
| ಆ) | ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು ಆದೇಶವಿದ್ದರೂ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿರುವುದಿಲ್ಲ, ಇದಕ್ಕೆ ಕಾರಣಗಳೇನು: (ವಿವರ ನೀಡುವುದು) | ವಿಶೇಷ ಜಿಲ್ಲಾಧಿಕಾರಿಗಳು ಬೆಂಗಳೂರು ಜಿಲ್ಲೆ ರವರ ಆದೇಶ ಸಂ.ಡಿಪಿಎಸ್(ಡಿ)ಸೀಆರ್ 10/04-05 ಬೆಂಗಳೂರು ರಂತೆ ಹೆಸ್ನಾಗರ ಗ್ರಾಮದ ಸರ್ವೆ ನಂ 5 ರಲ್ಲಿ 52 ಎಕರೆ 25 ಗುಂಟೆ ಜಮೀನನ್ನು ಅರಣ್ಯ ಇಲಾಖೆಗೆ ಸಂರಕ್ಷಣೆಗಾಗಿ ವರ್ಗಾಯಿಸುವ ಬಗ್ಗೆ ಆದೇಶಿಸಲಾಗಿರುತ್ತದೆ. |

ಈ ಕೆಳಕಂಡ ಕಾರಣಗಳಿಂದಾಗಿ ಅರಣ್ಯ ಇಲಾಖೆಗೆ ಜಮೀನನ್ನು ಹಸ್ತಾಂತರಿಸಲು ವಿಳಂಬವಾಗಿರುತ್ತದೆ:

1. ಅರಣ್ಯ ಇಲಾಖೆಗೆ ಮಂಜೂರಾಗಿರುವ ಮಂಜೂರಿ ವಿಸ್ತೀರ್ಣವನ್ನು ಗುರುತಿಸಿರುವ ಮಂಜೂರಿ ನಕ್ಷೆ ಇರುವುದಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಒಟ್ಟು 78-05 ಎಕರೆ-ಗುಂಟೆ ವಿಸ್ತೀರ್ಣ ಇರುವುದರಿಂದ ಈ ಒಟ್ಟು ವಿಸ್ತೀರ್ಣದ ಪೈಕಿ ಅರಣ್ಯ ಇಲಾಖೆಗೆ ಸೇರಿದ 52-25 ಎಕರೆ-ಗುಂಟೆ ಪ್ರದೇಶವನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಗಿರುವುದಿಲ್ಲ.

2. ಸ.ನಂ 5 ರಲ್ಲಿ ಒಟ್ಟು 78-05 ಎಕರೆ-ಗುಂಟೆ ಜಮೀನು ಇದ್ದು, ಈ ಪೈಕಿ ಈ ಕೆಳಕಂಡಂತೆ ಮಂಜೂರಿ/ಅನುಭವ/ಒತ್ತುವರಿ ಇರುತ್ತದೆ.

| | | |
|---|---|---|
| ಸರ್ಕಾರಿ ಪ್ರೌಢಶಾಲೆ ಆಟದ ಮೈದಾನಕ್ಕೆ | ಮಂಜೂರಿ | 8-00 ಎಕರೆ |
| ಸಾರ್ವಜನಿಕ ಸ್ಮಶಾನಕ್ಕೆ | ಮಂಜೂರಿ | 7-00 ಎಕರೆ |
| ಆಶ್ರಯ ಯೋಜನೆಯಡಿ | ಮಂಜೂರಿ | 8-00 ಎಕರೆ |
| ಯಲಮ್ಮ ದೇವಸ್ಥಾನ | ಒತ್ತುವರಿ | 2-20 ಎ-ಗುಂ |
| ಕಾವೇರಿ ನೀರು ಸಂಗ್ರಹಣಾ ಟ್ಯಾಂಕ್ | ಒತ್ತುವರಿ | 0-07 ಗುಂಟೆ |
| ಹೊಸಹಳ್ಳಿ ಇಂದ ಹೆಸ್ನಾಗರ. ಹೆಸ್ನಾಗರ ಇಂದ ಬೊಮ್ಮಸಂದ್ರದ ಮಾರ್ಗ | ರೂಢೀ ದಾರಿ | 5-00 ಎಕರೆ |
| ಒಟ್ಟು | | 30-27 ಎ-ಗುಂ |

3. ಈ ಕೆಳಕಂಡ 21 ಪ್ರಕರಣಗಳಲ್ಲಿ ನಮೂನೆ 50, 53 ರ ಅರ್ಜಿಗಳು ಸಲ್ಲಿಕೆಯಾಗಿದ್ದು, ಇವರು ಅನುಭವದಲ್ಲಿದ್ದು, ಸದರಿ ಪ್ರಕರಣಗಳು ಅನಧಿಕೃತ ಸಾಗುವಳಿ ಸಕ್ರಮ ಸಮಿತಿಯಿಂದ ಅನುಮೋದನೆಗೊಂಡು ಸಾಗುವಳಿ ಚೀಟಿ ನೀಡದೇ ಇರುವ ಒಟ್ಟು 694 ಪ್ರಕರಣಗಳ ಪೈಕಿ ಸದರಿ ಪ್ರಕರಣಗಳು ಒಂದಾಗಿದ್ದು, ಹಾಗೂ ಸದರಿ 21 ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾನ್ಯ ರಾಷ್ಟ್ರೀಯ ಆಯೋಗ, ಅನುಸೂಚಿತ ಜಾತಿ ಆಯೋಗದಲ್ಲಿ ಸಂ. 08/ESDW/30/2024-RU ರಂತೆ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಅನುಭವದಾರರ ವಿರುದ್ಧ ಯಾವುದೇ ಕ್ರಮಜರುಗಿಸದೆ ಯಥಾಸ್ಥಿತಿ ಕಾಪಾಡುವ ಬಗ್ಗೆ ಆದೇಶವಿರುತ್ತದೆ

| ಕ್ರ.ಸಂ | ಅರ್ಜಿದಾರರ ಹೆಸರು | ಗ್ರಾಮ | ಸ.ನಂ | ವಿಸ್ತೀರ್ಣ(ಎ/ಗು) |
|---|---|---|---|---|
| 1 | ಹೆಚ್.ವೈ.ರಾಮಚಂದ್ರಪ್ಪ ಬಿನ್ ಯಲ್ಲಪ್ಪ | ಹೆಸ್ನಾಗರ | 5 | 0-35 |
| 2 | ಎ.ವೈ.ಜೋತಯ್ಯ ಬಿನ್ ಅತ್ತಿಬೆಲೆ ಯಲ್ಲಪ್ಪ | ಹೆಸ್ನಾಗರ | 5 | 0-30 |
| 3 | ಲಕ್ಕಯ್ಯ ಬಿನ್ ಯಲ್ಲಪ್ಪ | ಹೆಸ್ನಾಗರ | 5 | 0-20 |
| 4 | ಕೃಷ್ಣಪ್ಪ ಬಿನ್ ಮುನಿತಾನಪ್ಪ | ಹೆಸ್ನಾಗರ | 5 | 2-00 |

| | | | | |
|---|---|---|---|---|
| 5 | ವೈ ಮುನಿಕೃಷ್ಣ ಬಿನ್ ಯಲ್ಲಪ್ಪ | ಹೆನ್ನಾಗರ | 5 | 0-20 |
| 6 | ಡಿ.ವೆಂಕಟರಮಣಪ್ಪ ಬಿನ್ ದೊಡ್ಡಣ್ಣ | ಹೆನ್ನಾಗರ | 5 | 1-20. |
| 7 | ಜೆ.ನಾಗರಾಜು ಬಿನ್ ಜ್ಯೋತಪ್ಪ | ಹೆನ್ನಾಗರ | 5 | 0-20 |
| 8 | ಹೆಚ್.ಎಂ.ವೆಂಕಟೇಶ್ ಬಿನ್ ಮುನಿನಂಜಪ್ಪ | ಹೆನ್ನಾಗರ | 5 | 2-00 |
| 9 | ಡಿ.ಮುನಿಯಪ್ಪ ಬಿನ್ ದೊಡ್ಡಣ್ಣ | ಹೆನ್ನಾಗರ | 5 | 1-00 |
| 10 | ಹೆಚ್.ಎಂ. ಮುನಿಯಪ್ಪ ಬಿನ್ ಮುನಿಯಲ್ಲಪ್ಪ | ಹೆನ್ನಾಗರ | 5 | 1-00. |
| 11 | ವೈ.ಮುನಿರಾಜು ಬಿನ್ ಯಲ್ಲಪ್ಪ | ಹೆನ್ನಾಗರ | 5 | 2-00 |
| 12 | ರಮೇಶ್ ಬಿನ್ ಲಿಂಗಪ್ಪ | ಹೆನ್ನಾಗರ | 5 | 1-10. |
| 13 | ಕಾಕಪ್ಪ ಬಿನ್ ಹೊಟ್ಟೆಪ್ಪ | ಹೆನ್ನಾಗರ | 5 | 1-10. |
| 14 | ಹೆಚ್.ಎಂ.ಜೋತಯ್ಯ ಬಿನ್ ಕೋ ಮುನಿಯಪ್ಪ | ಹೆನ್ನಾಗರ | 5 | 1-00 |
| 15 | ಹೆಚ್.ಎಂ.ಜೋತೇಶ್ ಬಿನ್ ಮುನಿನಂಜಪ್ಪ | ಹೆನ್ನಾಗರ | 5 | 0-30 |
| 16 | ಮದ್ದೂರಪ್ಪ ಬಿನ್ ದೊಡ್ಡಮದ್ದೂರಪ್ಪ | ಹೆನ್ನಾಗರ | 5 | 0-20 |
| 17 | ಬಿ.ಜೋತಯ್ಯ ಬಿನ್ ಗುರಪ್ಪ | ಹೆನ್ನಾಗರ | 5 | 1-20. |
| 18 | ಮುನಿಯಲ್ಲಪ್ಪ ಬಿನ್ ರಾಮಯ್ಯ | ಹೆನ್ನಾಗರ | 5 | 1-00 |
| 19 | ಕೆ.ಮುನಿನಂಜಪ್ಪ ಬಿನ್ ಕುಂಜಪ್ಪ | ಹೆನ್ನಾಗರ | 5 | 1-20. |
| 20 | ಕೆ.ರಾಮಚಂದ್ರ ಬಿನ್ ಕೃಷ್ಣಪ್ಪ | ಹೆನ್ನಾಗರ | 5 | 0-35 |
| 21 | ನಾಗಣ್ಣ ಬಿನ್ ಸಿದ್ದಪ್ಪ | ಹೆನ್ನಾಗರ | 5 | 2-00 |
| | ಒಟ್ಟು | | | 24-10. |

4. ಮೇಲಿನ ಕೋಷ್ಟಕಗಳಲ್ಲಿ ನಮೂದಿಸಿರುವಂತೆ, ಮಂಜೂರಿ ಮತ್ತು ಒತ್ತುವರಿ ವಿಸ್ತೀರ್ಣವು ಅರಣ್ಯ ಇಲಾಖೆಗೆ ಮಂಜೂರಾಗಿರುವ ಜಮೀನಿಗೂ ಒಳಗೊಂಡಂತೆ ಇರುತ್ತದೆ.
5. ಸರ್ವೆ ನಂಬರ್ 5 ರಲ್ಲಿನ ಒತ್ತುವರಿ ತೆರವುಗೊಳಿಸುವ ವಿಚಾರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಸಂ.ಡಬ್ಲ್ಯೂಪಿ ನಂ.11046/2021 (ಪಿಐಎಲ್-ಕೆಎಲ್‌ಆರ್) ರಂತೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಾಗಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿ ಇರುತ್ತದೆ.

| | | |
|---|---|---|
| ಇ) | ಸದರಿ ಜಾಗದಲ್ಲಿ ಅನಧಿಕೃತ ಕಟ್ಟಡ/ವಸತಿಗಳನ್ನು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಕ್ರಮವಾಗಿ ನಿರ್ಮಿಸುತ್ತಿರುವವರ ಮೇಲೆ ಯಾವ ಕ್ರಮ ಕೈಗೊಂಡಿದೆ: | ಸ.ನಂ.5 ರಲ್ಲಿ ಅಂದಾಜು 70 ರಿಂದ 80 ಅನಧಿಕೃತ ಮನೆಗಳು ನಿರ್ಮಾಣವಾಗಿದ್ದು, ಈ ಮನೆಗಳಿಗೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 94ಸಿಸಿ ರಡಿ ಸಕ್ರಮ ಕೋರಿ ಅರ್ಜಿ ಸಲ್ಲಿಸಿದ್ದು, ಸಕ್ರಮಕ್ಕಾಗಿ ಬಾಕಿ ಇರುತ್ತದೆ ಹಾಗೂ ಸದರಿ ಅನಧಿಕೃತ ಮನೆಗಳ ಬಗ್ಗೆ ಪೂರ್ಣ ಪ್ರಮಾಣದ ಮಾಹಿತಿಗಾಗಿ ಸರ್ವೆ ಕಾರ್ಯ ಕೈಗೊಂಡು ಕ್ರಮವಹಿಸಲಾಗುತ್ತದೆ. |
| ಈ) | ಈ ಜಮೀನು ಸ.ನಂ 5 ರಲ್ಲಿ ಆಕಾರ್ ಬಂದ್‌ನಂತೆ ಒಟ್ಟು ವಿಸ್ತೀರ್ಣ 78-05 ಎ/ಗುಂಟೆ ಇದ್ದು, ಸದರಿ ವಿಸ್ತೀರ್ಣ ಜಮೀನಲ್ಲಿ 8 ಎಕರೆ ಸರ್ಕಾರಿ ಪ್ರೌಢಶಾಲಾ ಆಟದ ಮೈದಾನಕ್ಕೆ ಮಂಜೂರಾಗಿದ್ದು, ಇದರಲ್ಲಿ 4 ಎಕರೆ ಸರ್ಕಾರಿ ಶಾಲೆ ನಿರ್ಮಿಸಿದ್ದು, ಇನ್ನೂ 4 ಎಕರೆ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹನ್ನಾಗರ ಗ್ರಾಮದ ಸ.ನಂ 5 ರಲ್ಲಿನ ಸರ್ಕಾರಿ ಪ್ರೌಢಶಾಲಾ ಆಟದ ಮೈದಾನಕ್ಕೆ ಮಂಜೂರಾಗಿರುವ 8-00 ಎಕರೆ ಜಮೀನಿನ ಪೈಕಿ ಶ್ರೀ ಯಲ್ಲಮ್ಮ ದೇವಸ್ಥಾನ ನಿರ್ಮಾಣವಾಗಿದ್ದು, ಈ ಬಗ್ಗೆ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು, ಸರ್ವೆ ಕಾರ್ಯ ಪೂರ್ಣಗೊಂಡ ನಂತರ ಒತ್ತುವರಿ ಬಗ್ಗೆ ಕಾನೂನು ರೀತ್ಯಾ ಕ್ರಮವಹಿಸಲಾಗುವುದು. |
| ಉ) | ಈ ಜಮೀನನ್ನು Botanical Garden ಮಾಡುವುದಾಗಿ ಅರಣ್ಯ ಇಲಾಖೆ ತಿಳಿಸಿದ್ದು, ಈ ಜಮೀನನ್ನು ಅರಣ್ಯ ಇಲಾಖೆಗೆ ಯಾವಾಗ ವರ್ಗಾವಣೆ ಮಾಡಲಾಗುವುದು? | ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಸಂ.ಡಿವಿಎಸ್(ಡಿ)ಸಿಆರ್ 10/04-05 ಹನ್ನಾಗರ ಗ್ರಾಮದ ಸರ್ವೆ ನಂ 5 ರಲ್ಲಿ, 52 ಎಕರೆ 25 ಗುಂಟೆ ಜಮೀನು ಅರಣ್ಯ ಇಲಾಖೆಗೆ ಸಂರಕ್ಷಣೆಗಾಗಿ ವರ್ಗಾಯಿಸುವ ಬಗ್ಗೆ ಆದೇಶಿಸಲಾಗಿರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಸಂ.ಡಬ್ಲ್ಯೂಪಿ ನಂ.11046/2021 (ಪಿಐಎಲ್-ಕೆಎಲ್‌ಆರ್) ರಂತೆ ಪ್ರಕರಣ ದಾಖಲಾಗಿದ್ದು, ಬಾಕಿ ಇರುತ್ತದೆ. |

ಸಂಖ್ಯೆ: RD-LGQ/84/2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು.